## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ. ಹರೀಶ್ ಕುಮಾರ್ ರವರು ಮಂಡಿಸಿರುವ ಶೂನ್ಯ ವೇಳೆಯ ಪ್ರಸ್ತಾವನೆಗೆ ಉತ್ತರ

**ಪ್ರಶ್ನೆ:**

"ರಸ್ತೆ ಅಪಘಾತಕ್ಕೆ ನಿತ್ಯ ಬಲಿ" ವಿಷಯ ಕುರಿತು ದಿನಾಂಕ 18.06.2023ರ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ವರದಿ ಪ್ರಕಟವಾಗಿರುತ್ತದೆ.

ರಾಜಧಾನಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ನಿತ್ಯ ಸಂಭವಿಸುವ ರಸ್ತೆ ಅಪಾಘಾತಗಳಲ್ಲಿ ಸರಾಸರಿ ಇಬ್ಬರು ಜೀವ ಕಳೆದುಕೊಳ್ಳುವುದು ಸಾಮಾನ್ಯ ಸಂಗತಿಯಾಗಿರುತ್ತದೆ. ಬೆಂಗಳೂರು ಒಂದು ದಶಕದಲ್ಲಿ ವಾಹನಗಳ ಸಂಖ್ಯೆ 55.26 ಲಕ್ಷದಿಂದ 1.04 ಕೋಟಿಗೆ ಏರಿಕೆಯಾಗಿದೆ. ಅಲ್ಲದೆ, ನಗರದಲ್ಲಿ ಪ್ರತಿನಿತ್ಯ 2000 ವಾಹನಗಳು ಹೊಸದಾಗಿ ರಸ್ತೆಗೆ ಇಳಿಯುತ್ತಿದ್ದು, ವಾಹನ ಸವಾರರ ಅತಿವೇಗ, ನಿರ್ಲಕ್ಷ್ಯ ಚಾಲನೆಯಿಂದ ಅಪಘಾತಗಳು ಸಂಭವಿಸುತ್ತಿರುವುದು ಪೋಲೀಸರ ವರದಿಯಲ್ಲಿ ದಾಖಲಾಗುತ್ತಿವೆ.

ಕಳೆದ ಮೂರು ವರ್ಷಗಳ ಅಂಕಿ ಅಂಶಗಳನ್ನು ಗಮನಿಸಿದಾಗ ಮಾರಣಾಂತಿಕ ಅಪಘಾತಗಳಲ್ಲಿ 2020ನೇ ಸಾಲಿನಲ್ಲಿ 493 ಮೃತಪಟ್ಟಿದ್ದರೆ, 2021ರಲ್ಲಿ 499, 2022 ರಲ್ಲಿ 595 ಪ್ರಕರಣಗಳು ವರದಿಯಾಗಿವೆ. ಬಹುತೇಕ ಎಲ್ಲ ಪ್ರಕರಣಗಳು ಭಾನುವಾರ ಹಾಗೂ ಮಂಗಳವಾರದಂದೆ ಸಂಭವಿಸಿವೆ.

ಕಳೆದ ಮೂರು ತಿಂಗಳಲ್ಲಿ ಬರೋಬ್ಬರಿ 205 ಮಂದಿ ಬೆಂಗಳೂರು ನಗರವೊಂದರಲ್ಲೇ ರಸ್ತೆ ಅಪಘಾತದಿಂದಾಗಿ ಪ್ರಾಣ ಕಳೆದುಕೊಂಡಿದ್ದಾರೆ. 2023 ರ ಆರಂಭದಿಂದ ಮಾರ್ಚ್ ಅಂತ್ಯದವರೆಗೂ ಬೆಂಗಳೂರಿನಲ್ಲಿ ಒಟ್ಟು 1,197 ರಸ್ತೆ ಅಪಘಾತಗಳು ಸಂಭವಿಸಿವೆ.

ಬೆಂಗಳೂರಿನ ಟ್ರಾಫಿಕ್ ದಟ್ಟಣೆ ನಿವಾರಣೆಗೆ ಇತ್ತೀಚೆಗೆ ಗೃಹಸಚಿವರು ಸಭೆ ನಡೆಸಿ ಎಲ್ಲ ಉನ್ನತ ಅಧಿಕಾರಿಗಳು ರಸ್ತೆಯಲ್ಲಿ ಕಾರ್ಯನಿರ್ವಹಿಸುವಂತೆ ಸೂಚಿಸಿದ್ದು, ಇದೇ ಮಾದರಿಯಲ್ಲಿ ಗುರುತಿಸಲಾಗಿರುವ ಅಪಘಾತ ವಲಯಗಳಲ್ಲಿ ಗಸ್ತು ವಾಹನಗಳನ್ನು ಹೆಚ್ಚಿಸುವುದು, ಎಚ್ಚರಿಕೆ ಫಲಕಗಳನ್ನು ಅಳವಡಿಸುವುದು ಇಂತಹ ಜಾಗೃತಿ ಮೂಡಿಸುವಂತಹ ಕೆಲಸಗಳನ್ನು ಸರ್ಕಾರ ಕೈಗೊಳ್ಳಬೇಕು. ನಿಯಮ ಮೀರಿ ವಾಹನ ಚಲಾಯಿಸುವವರಿಗೆ ಡ್ರೈವಿಂಗ್ ಲೈಸನ್ಸನ್ನು ರದ್ದುಗೊಳಿಸುವ ಕಟ್ಟುನಿಟ್ಟಿನ ಕ್ರಮವನ್ನು ಕೈಗೊಳ್ಳಬೇಕೆಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ಕುರಿತು.

**ಉತ್ತರ:**

ಬೆಂಗಳೂರು ನಗರ ಸಂಚಾರ ವಿಭಾಗದಿಂದ ಅಪಘಾತಗಳನ್ನು ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು, ಅಪಘಾತಗಳನ್ನು ತಡೆಗಟ್ಟುವ ದೃಷ್ಟಿಯಿಂದ ಕೈಗೊಂಡಿರುವ ಕ್ರಮಗಳ ವಿವರ ಈ ಕೆಳಕಂಡಂತಿರುತ್ತದೆ.

**ಅಪಘಾತಗಳನ್ನು ನಿಯಂತ್ರಣ ಮಾಡುವ ನಿಟ್ಟಿನಲ್ಲಿ ಕೈಗೊಂಡಿರುವ ಸುರಕ್ಷತಾ ಕ್ರಮಗಳು :-**

- ರಸ್ತೆ ಅಪಘಾತಗಳಿಗೆ ಸಂಚಾರ ನಿಯಮಗಳನ್ನು ಪಾಲಿಸದೇ ಇರುವುದು ಒಂದು ಪ್ರಮುಖ ಕಾರಣವಾಗಿದ್ದು, ಸಂಚಾರ ನಿಯಮ ಉಲ್ಲಂಘನೆಗಳನ್ನು ತಡೆಗಟ್ಟಲು ಪ್ರವರ್ತನ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಕೈಗೊಳ್ಳಲು ಕ್ರಮ ವಹಿಸಲಾಗಿರುತ್ತದೆ. ಬೆಂಗಳೂರು ನಗರದಲ್ಲಿ ಸಂಪರ್ಕ ಸಹಿತ ಹಾಗೂ ಸಂಪರ್ಕ ರಹಿತ ನಿಯಮ ಜಾರಿಯಡಿಯಲ್ಲಿ ಪ್ರವರ್ತನ ಚಟುವಟಿಕೆಯನ್ನು ಕೈಗೊಳ್ಳಲಾಗುತ್ತಿದ್ದು, ಕಳೆದ 3 ವರ್ಷಗಳಲ್ಲಿ ದಾಖಲು ಮಾಡಲಾಗಿರುವ ಪ್ರಕರಣಗಳ ವಿವರ ಈ ಕೆಳಕಂಡಂತಿರುತ್ತದೆ.

| ಕ್ರಮ ಸಂಖ್ಯೆ | ವರ್ಷ | ದಾಖಲು ಮಾಡಲಾಗಿರುವ ಪ್ರಕರಣಗಳು |
|---|---|---|
| 1 | 2020 | 8383737 |
| 2 | 2021 | 9305857 |
| 3 | 2022 | 10449571 |
| 4 | 2023 | 4329522 |

- ಶಾಲಾ / ಕಾಲೇಜು ಮಕ್ಕಳಿಗೆ ಸಂಚಾರ ನಿಯಮಗಳು ಮತ್ತು ಅವುಗಳ ಪಾಲನೆಯ ಮಹತ್ವ ಹಾಗೂ ರಸ್ತೆ ಸುರಕ್ಷತೆ ಬಗ್ಗೆ ತಿಳುವಳಿಕೆ ನೀಡುವ ಕಾರ್ಯಕ್ರಮವನ್ನು ನಿರಂತರವಾಗಿ ಹಮ್ಮಿಕೊಂಡಿದ್ದು. ಆ ಮೂಲಕ ರಸ್ತೆ ಅಪಘಾತಗಳನ್ನು ತಡೆಗಟ್ಟಲು ಕ್ರಮಕೈಗೊಂಡಿದೆ.
- ಆಟೋ ಚಾಲಕರ ಸಂಘ, ಸರಕು ಸಾಗಣೆ ವಾಹನಗಳ ಚಾಲಕರ ಸಂಘ ಮತ್ತು ಖಾಸಗಿ ಕಂಪನಿಗಳ ವಾಹನಗಳ ಚಾಲಕರುಗಳು ಹಾಗೂ ಬಿಎಂಟಿಸಿ ಬಸ್ ಡಿಪೊಗೆ ಭೇಟಿ ನೀಡಿ ಸಭೆ ನಡೆಸಿ ರಸ್ತೆ ಸುರಕ್ಷತೆಯ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.
- ಸಾರ್ವಜನಿಕರಿಗೆ ಹಾಗೂ ವಾಹನ ಚಾಲಕರಿಗೆ ರಸ್ತೆ ನಿಯಮಗಳನ್ನು ಪಾಲಿಸುವಂತೆ ಜಾಗೃತಿ ಮೂಡಿಸಲಾಗುತ್ತಿರುತ್ತದೆ.
- ಪಾದಚಾರಿಗಳು ಎಲ್ಲೆಂದರಲ್ಲಿ ರಸ್ತೆ ದಾಟದ ಹಾಗೆ ಸೆಂಟರ್ ಮೀಡಿಯನ್ ಮೇಲೆ ಎತ್ತರದ ಗ್ರಿಲ್ ಹಾಕುವ ಕುರಿತು ಸಂಬಂಧಪಟ್ಟ ಇಲಾಖೆಗೆ ವಿವರಗಳನ್ನು ಸಲ್ಲಿಸಲಾಗಿರುತ್ತದೆ.
- ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡುವ ಚಾಲಕ/ಸವಾರರುಗಳ ವಿರುದ್ಧ ಪರಿಣಾಮಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿರುತ್ತದೆ.
- ರಸ್ತೆಯಲ್ಲಿ ಎಲ್ಲೆಂದರಲ್ಲಿ ನಿಲುಗಡೆಯಾಗುತಿದ್ದ ವಾಹನಗಳನ್ನು ತೆರವುಗೊಳಿಸಿ ವಾಹನಗಳು ಸುಗಮವಾಗಿ ಓಡಾಡಲು ಅನುವು ಮಾಡಿಕೊಡಲಾಗಿದೆ. ಈ ಮೂಲಕ ರಸ್ತೆ ಅಪಘಾತಗಳನ್ನು ಕಡಿಮೆ ಮಾಡಲು ಕ್ರಮಕೈಗೊಂಡಿದೆ.
- ರಸ್ತೆ ಅಪಘಾತಗಳ ವೈಜ್ಞಾನಿಕ ತನಿಖೆಯನ್ನು ಜಂಟಿಯಾಗಿ ನಡೆಸಲು, ಆರ್.ಟಿ.ಓ ಅಧಿಕಾರಿಗಳು ಹಾಗೂ ಬಿ.ಬಿ.ಎಂ.ಪಿ ಅಧಿಕಾರಿಗಳೊಂದಿಗೆ ತನಿಖೆಯನ್ನು ಮಾಡಿ ಅಪಘಾತಗಳಿಗೆ ವೈಜ್ಞಾನಿಕ ಕಾರಣಗಳನ್ನು ಕಂಡುಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.
- ವಾಹನಗಳ ವೇಗವನ್ನು ನಿಯಂತ್ರಿಸಲು ವೈಜ್ಞಾನಿಕ ರಸ್ತೆ ಉಬ್ಬುಗಳನ್ನು ನಿರ್ಮಿಸಲು ಬಿ.ಬಿ.ಎಂ.ಪಿ ಸಹಯೋಗದೊಂದಿಗೆ ಕ್ರಮ ಕೈಗೊಳ್ಳಲಾಗುತ್ತಿದೆ.
- ಪಾದಾಚಾರಿಗಳ ಸುರಕ್ಷತೆಗಾಗಿ ಬಿ.ಬಿ.ಎಂ.ಪಿ ಸಹಯೊಗದೊಂದಿಗೆ ಹೊಸದಾಗಿ ಪಾದಾಚಾರಿ ರಸ್ತೆಗಳನ್ನು ಹಾಗೂ ಸ್ಕೈವಾಕ್‌ಗಳನ್ನು ನಿರ್ಮಿಸಿ, ಪಾದಚಾರಿ ರಸ್ತೆಗೆ ಗ್ರಿಲ್‌ಗಳನ್ನು ಅಳವಡಿಸಿ, ರಸ್ತೆ ಅಪಘಾತಗಳನ್ನು ಕಡಿಮೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.
- 2020, 2021 & 2022ನೇ ಸಾಲಿಗೆ ಅನ್ವಯವಾಗುವಂತೆ ಪದೇ ಪದೇ ಅಪಘಾತಗಳು ಸಂಭವಿಸುವ ಒಟ್ಟು 63 ಬ್ಲಾಕ್‌ಸ್ಪಾಟ್‌ಗಳನ್ನು ಗುರುತಿಸಲಾಗಿದ್ದು, ಸದರಿ ಬ್ಲಾಕ್‌ಸ್ಪಾಟ್‌ಗಳಲ್ಲಿ ರಸ್ತೆ ಅಪಘಾತಗಳಿಗೆ ಸಾಮಾನ್ಯ ಕಾರಣಗಳು ಏನು ಎಂಬ ಬಗ್ಗೆ ಪರಾಮರ್ಶಿಸಿ, ಸದರಿ ಸ್ಥಳಗಳಲ್ಲಿ ಅಪಘಾತಗಳನ್ನು ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳು ಹಾಗೂ ಕೈಗೊಳ್ಳಬೇಕಾದ ಕಾಮಗಾರಿಗಳ ಬಗ್ಗೆ ಇತರೆ ಪೌರಸಂಸ್ಥೆಯ ಅಧಿಕಾರಿಗಳೊಂದಿಗೆ ಚರ್ಚಿಸಿ, ಮಾಹಿತಿಯನ್ನು ಸಂಬಂಧಪಟ್ಟ ಇಲಾಖೆಗೆ ಸಲ್ಲಿಸಲು ಕ್ರಮ ಕೈಗೊಂಡಿರುತ್ತದೆ.
- ಸಾರ್ವಜನಿಕರು ತಮ್ಮ ದಿನ ನಿತ್ಯದ ಓಡಾಟಕ್ಕೆ ಸಾರ್ವಜನಿಕ ಸಾರಿಗೆಗಳಾದ ಬಿ.ಎಂ.ಟಿ.ಸಿ, ಕೆ.ಎಸ್.ಆರ್.ಟಿ.ಸಿ ಬಸ್ಸುಗಳು, ಮೆಟ್ರೋ ರೈಲು, ರೈಲುಗಳನ್ನು ಹೆಚ್ಚಾಗಿ ಬಳಸುವಂತೆ ತಿಳುವಳಿಕೆ

ಮೂಡಿಸುವ ಮತ್ತು ಅದಕ್ಕಾಗಿ ಪ್ರಚಾರಗಳನ್ನು ಕೈಗೊಂಡು ವಾಹನ ದಟ್ಟಣೆಯನ್ನು ಕಡಿಮೆ ಮಾಡಿ ರಸ್ತೆ ಅಪಘಾತಗಳನ್ನು ನಿಯಂತ್ರಣಕ್ಕೆ ತರಲು ಕ್ರಮ ಕೈಗೊಳ್ಳಲಾಗುತ್ತಿದೆ.

- ದ್ವಿಚಕ್ರ ವಾಹನ ಸವಾರರು ಗುಣಮಟ್ಟದ ಹೆಲ್ಮೆಟ್ ಧರಿಸುವಂತೆ ಮತ್ತು ವಾಹನಗಳನ್ನು ಸುರಕ್ಷಿತವಾಗಿ ಚಾಲನೆ ಮಾಡುವ ಬಗ್ಗೆ ತಿಳುವಳಿಕೆ ನೀಡಲು ಕ್ರಮ ಕೈಗೊಳ್ಳಲಾಗಿರುತ್ತದೆ.
- ಪ್ರಿಂಟ್ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳ ಮೂಲಕ ಸಂಚಾರ ನಿಯಮಗಳ ಪಾಲನೆಯ ಮಹತ್ವ ಮತ್ತು ರಸ್ತೆ ಸುರಕ್ಷತೆ ಕುರಿತು ಅರಿವನ್ನು ಮೂಡಿಸಿ ರಸ್ತೆ ಅಪಘಾತಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ.
- ಠಾಣಾ ಸರಹದ್ದುಗಳಲ್ಲಿ ಉಂಟಾಗಿರುವ ರಸ್ತೆಗುಂಡಿಗಳನ್ನು ಪಟ್ಟಿ ಮಾಡಿ ಸರಿಪಡಿಸಿ ಕೊಡುವಂತೆ ಬಿ.ಬಿ.ಎಂ.ಪಿಗೆ ಮನವಿ ಮಾಡಲಾಗಿರುತ್ತದೆ. ಆ ಮೂಲಕ ಸಂಭವನೀಯ ರಸ್ತೆ ಅಪಘಾತಗಳನ್ನು ನಿಯಂತ್ರಿಸಲು ಸತತವಾಗಿ ಪ್ರಯತ್ನಿಸಲಾಗುತ್ತಿದೆ.
- ಹೆಚ್ಚು ರಸ್ತೆ ಅಪಘಾತಗಳು ಸಂಭವಿಸುವ ಸ್ಥಳಗಳಲ್ಲಿ 2 ಪಾಳಿಯಲ್ಲಿ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ವಾಹನಗಳ ಸುಗಮ ಸಂಚಾರ ನಿರ್ವಹಣೆ ಕರ್ತವ್ಯಕ್ಕೆ ನೇಮಿಸಲು ಹಾಗೂ ಅಗತ್ಯ ಸೂಚನಾಫಲಕಗಳನ್ನು ಅಳವಡಿಸಲು ಕ್ರಮ ಕೈಗೊಂಡಿರುತ್ತದೆ.
- ಬಿ.ಬಿ.ಎಂ.ಪಿಯ ಸಹಯೋಗದೊಂದಿಗೆ ಸೆಂಟರ್ ಮೀಡಿಯನ್‌ಗಳನ್ನು ನಿರ್ಮಿಸುವ ಮೂಲಕ ವಾಹನಗಳ ಸಂಘರ್ಷಣೆಯನ್ನು ನಿಯಂತ್ರಿಸಿ ರಸ್ತೆ ಅಪಘಾತಗಳನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ಬೀದಿ ದೀಪಗಳು ಸರಿಯಿಲ್ಲದೇ ಇರುವ ಸ್ಥಳಗಳು ಮತ್ತು ಹೊಸದಾಗಿ ಬೀದಿದೀಪಗಳ ಅವಶ್ಯಕತೆ ಇರುವ ಸ್ಥಳಗಳನ್ನು ಪಟ್ಟಿಮಾಡಿ ಸರಿಪಡಿಸಲು ಮತ್ತು ಹೊಸದಾದ ಬೀದಿದೀಪಗಳನ್ನು ಅಳವಡಿಸಲು ಬೆಸ್ಕಾಂನೊಂದಿಗೆ ಪತ್ರ ವ್ಯವಹಾರ ಮಾಡಲಾಗಿರುತ್ತದೆ.
- ಜೀಬ್ರಾಕ್ರಾಸಿಂಗ್‌ಗೆ ಬಣ್ಣ ಬಳಿಸಲು ಸ್ಥಳಗಳನ್ನು ಪಟ್ಟಿಮಾಡಿ ಬಿ.ಬಿ.ಎಂ.ಪಿಗೆ ನೀಡಿದ್ದು ಅದರ ಸಹಯೋಗದೊಂದಿಗೆ ಜೀಬ್ರಾಕ್ರಾಸಿಂಗ್‌ಗೆ ಬಣ್ಣ ಬಳಿಸಲಾಗುತ್ತಿದೆ.
- ಬಿ.ಎಂ.ಟಿ.ಸಿ / ಕೆ.ಎಸ್.ಆರ್.ಟಿ.ಸಿ ಬಸ್ ಚಾಲಕರಿಗೆ ಸಂಸ್ಥೆಯ ವಾಹನಗಳಿಂದ ಉಂಟಾಗುತ್ತಿರುವ ಹೆಚ್ಚಿನ ಸಂಖ್ಯೆಯ ಅಪಘಾತಗಳ ಕುರಿತು ತಿಳುವಳಿಕೆ ನೀಡಿ ಸಂಚಾರ ನಿಯಮಗಳ ಪಾಲನೆಯ ಮಹತ್ವ ಮತ್ತು ರಸ್ತೆ ಸುರಕ್ಷತೆ ಕುರಿತು ಬಿ.ಎಂ.ಟಿ.ಸಿ. ಡಿಪೋಗಳಿಗೆ ಖುದ್ದು ಭೇಟಿ ನೀಡಿ ತರಬೇತಿ ನೀಡುವ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ.
- ಅಪಘಾತಗಳ ನಿಯಂತ್ರಣಕ್ಕಾಗಿ ಮದ್ಯಪಾನ ಮಾಡಿ ವಾಹನ ಚಾಲನೆ ಹೆಲ್ಮೆಟ್ ರಹಿತ ಚಾಲನೆ, ಹಾಗೂ ಇನ್ನಿತರೆ ಗುಣಾತ್ಮಕ ಕೇಸುಗಳ ಬಗ್ಗೆ ವಿಶೇಷ ಕಾರ್ಯಚರಣೆಯನ್ನು ಹಮ್ಮಿಕೊಂಡು ಕಾಲ ಕಾಲಕ್ಕೆ ದಾಖಲುಮಾಡಿ ಅಪಘಾತ ನಿಯಂತ್ರಣ ಮಾಡಲಾಗುತ್ತಿದೆ.
- ವಾಹನಗಳ ವೇಗವನ್ನು ನಿಯಂತ್ರಿಸಲು ರಂಬ್ಲರ್ ಸ್ಟ್ರಿಪ್ಸ್‌ಗಳನ್ನು ಹಾಕುವ ಬಗ್ಗೆ ಸಂಬಂಧಪಟ್ಟ ಪೌರಸಂಸ್ಥೆಗಳೊಂದಿಗೆ ಚರ್ಚಿಸಿ ಮಾಹಿತಿಯನ್ನು ಸಲ್ಲಿಸಲಾಗಿರುತ್ತದೆ.
- ರಸ್ತೆಯ ಬದಿಗಳಲ್ಲಿ ಬೆಳೆದು ನಿಂತಿರುವ ಮರದ ಕೊಂಬೆಗಳನ್ನು ತೆರವುಗೊಳಿಸಿ ವಾಹನ ಸವಾರ/ಚಾಲಕರಿಗೆ ರಸ್ತೆಯು ಸ್ಪಷ್ಟವಾಗಿ ಗೋಚರಿಸುವಂತೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.
- ಅಪಘಾತಗಳ ಕಾರಣವನ್ನು ತಿಳಿಯಲು ಮತ್ತು ನಿಯಂತ್ರಿಸಲು ಬಿ.ಬಿ.ಎಂ.ಪಿ. ಸಾರಿಗೆ ಇಲಾಖೆಯೊಂದಿಗೆ ಜಂಟಿ ಪರಿವೀಕ್ಷಣೆ ಮಾಡಿ ಅಪಘಾತಗಳನ್ನು ವೈಜ್ಞಾನಿಕವಾಗಿ ಅಭ್ಯಸಿಸಿ ಅಪಘಾತಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ.
- ಸಂಚಾರಿ ವಾರ್ಡನ್ ಸಂಸ್ಥೆಯು ಬೆಂಗಳೂರು ನಗರ ಸಂಚಾರ ಪೊಲೀಸರಿಗೆ ರಸ್ತೆ ಸುರಕ್ಷತೆ ಮತ್ತು ಸಂಚಾರ ನಿಯಂತ್ರಣಾ ಚಟುವಟಿಕೆಯಲ್ಲಿ ಅವಿರತವಾಗಿ ಸಹಾಯವನ್ನು ಮಾಡುವಲ್ಲಿ ಶ್ರಮಿಸುತ್ತಿದ್ದು, ಈ ಸಂಸ್ಥೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಸ್ವಯಂ ಪ್ರೇರಿತರಾಗಿ ಟ್ರಾಫಿಕ್ ವಾರ್ಡನ್ ಸೇವೆಗೆ